ಮಂಗಳೂರು ವಿಧಾನಸಭಾ ವ್ಯಾಪ್ತಿಗೆ ಒಳಪಡುವ ಒಳನಾಡು ಸಾರಿಗೆ ಬಗ್ಗೆ

301 : (393)

ಶ್ರೀ ಖಾದರ್.ಯು.ಟಿ. (ಮಂಗಳೂರು)

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ಯಾವ ಯಾವ ಪ್ರದೇಶಗಳು ಒಳನಾಡು ಜಲಸಾರಿಗೆ ಇಲಾಖೆ ವ್ಯಾಪ್ತಿಗೆ ಸೇರಿದೆ; (ವಿವರ ಒದಗಿಸುವುದು)

ಆ) ಈ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು;

ಇ) ಕಳೆದ 3 ವರ್ಷಗಳಿಂದ ಒಳನಾಡು ಜಲಸಾರಿಗೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ? (ವರ್ಷವಾರು ವಿವರ ಒದಗಿಸುವುದು)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ

(ಮಾನ್ಯ ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ರಾಜ್ಯ ಸರ್ಕಾರದ ವತಿಯಿಂದ ಮಂಗಳೂರು ವಿಧಾನಸಭಾ ಕ್ಷೇತ್ರದ ಪ್ರದೇಶಗಳಲ್ಲಿ ಈ ಕೆಳಗಿನ ಕಡವು ಸೇವೆಗಳನ್ನು ಸರ್ಕಾರದ ಮೇಲುಸ್ತುವಾರಿಯಲ್ಲಿ ಹರಾಜು ಮೂಲಕ ಖಾಸಗಿಯವರಿಂದ ನಡೆಸಲಾಗುತ್ತಿದೆ.

- ಸಜಿಪನಾಡು – ತುಂಬೆ
- ಜಲದಕಟ್ಟೆ – ಪರಂಗಿ ಪೇಟೆ
- ಅಡ್ಡಾರ್ – ಪಾವೂರ್
- ಮಂಗಳೂರು – ಬೇಂಗ್ರೆ ದಕ್ಷಿಣ ಧಕ್ಕೆ
- ಮಂಗಳೂರು – ಕಸಬಾ ಉತ್ತರ ಧಕ್ಕೆ
- ಸುಲ್ತಾನ ಬತ್ತೇರಿ – ತಣ್ಣೀರು ಬಾವಿ
- ಚೊಕ್ಕ ಪಟ್ಟಣ – ಮರಳು ದಿನ್ನೆ

ಆ) ಈ ಪ್ರದೇಶದಲ್ಲಿ ಲೆಕ್ಕ ಶೀರ್ಷಿಕೆ 5051 ಬಂದರು ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಉಪಯೋಗಿಸಿ ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

1. ಮಂಗಳೂರು ಹಳೇ ಬಂದರು ಪ್ರದೇಶದ ತಣ್ಣೀರು ಬಾವಿ. ತೋಟ ಮಹಾಜನ ಸಂಘದ ಬಳಿ ಪ್ರಯಾಣಿಕರ ಜೆಟ್ಟಿ ನಿರ್ಮಾಣ.

2. ಮಂಗಳೂರು ಹಳೇ ಬಂದರಿನ ದೇವಿ ಮರೈನ್ ಬಳಿ ಪ್ರಯಾಣಿಕರ ಜೆಟ್ಟಿ ನಿರ್ಮಾಣ.

3. ಮಂಗಳೂರು ಬೋಳಿಯಾರ ಗ್ರಾಮದ ಜಲದಕಟ್ಟೆ ಎಂಬಲ್ಲಿ ಪ್ರಯಾಣಿಕರ ಜೆಟ್ಟಿ ನಿರ್ಮಾಣ ಹಾಗೂ ಬದಿ ಸಂರಕ್ಷಣಾ ಕಾಮಗಾರಿ.

4. ಮಂಗಳೂರು ಹಳೇ ವಾಣಿಜ್ಯ ಬಂದರಿನ ಬಳಿ ಬಿಎಂಡಿ ಫೆರಿಯ ಪ್ರಯಾಣಿಕರ ಜೆಟ್ಟಿ ನಿರ್ಮಾಣ ಕಾಮಗಾರಿ.

5. ತಣ್ಣೀರು ಬಾವಿ ನಾಯರ್ ಕುದ್ರು ಎಂಬಲ್ಲಿ ಪ್ರಯಾಣಿಕರ ಜೆಟ್ಟಿ ನಿರ್ಮಾಣ ಮತ್ತು ಬದಿ ಕಟ್ಟುವುದು.

6. ಹರೇಕಳ ಗ್ರಾಮದಲ್ಲಿ ಫೇರಿಗೆ ಪ್ರಯಾಣಿಕರ ಜೆಟ್ಟಿ ನಿರ್ಮಾಣ ಮತ್ತು ಬದಿ ಕಟ್ಟುವ ಕಾಮಗಾರಿ.

7. ಅಡ್ಯಾರ ಅರ್ಕುಳ ಗ್ರಾಮದ ಫೇರಿಗಳಿಗೆ ಪ್ರಯಾಣಿಕರ ಜೆಟ್ಟಿ ನಿರ್ಮಾಣ ಕಾಮಗಾರಿ.

ಇ) ಕಳೆದ 3 ವರ್ಷಗಳಲ್ಲಿ ರಾಜ್ಯದ ಒಳನಾಡು ಜಲಸಾರಿಗೆ ಅಭಿವೃದ್ಧಿಗಾಗಿ ವೆಚ್ಚ ಮಾಡಲಾದ ಹಣದ ವಿವರ ಕೆಳಗಿನಂತಿದೆ.

2009-10	2010-11	2011-12
ರೂ.27.77 ಲಕ್ಷ	ರೂ.67.67 ಲಕ್ಷ	ರೂ.65.98 ಲಕ್ಷ

ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ.

312 (384)

ಶ್ರೀ ನೆ.ಲ.ನರೇಂದ್ರಬಾಬು

ಅ) ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿರುವ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರ್ಪಡೆಯಾದ ಮೇಲೆ ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಆ) ಈ ದೇವಸ್ಥಾನವು ಇಲಾಖೆಗೆ ಸೇರ್ಪಡೆಯಾದ ಮೇಲೆ ಪ್ರಧಾನ ಅರ್ಚಕರು/ಅರ್ಚಕರು ಹಾಗೂ ಸಿಬ್ಬಂದಿ ವರ್ಗದವರಿಗೆ ನೀಡಲಾಗುತ್ತಿರುವ ವೇತನವೆಷ್ಟು;

ಇ) ಈ ದೇವಸ್ಥಾನಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ವಿನಿಯೋಗಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಉಳಿಕೆಯಾಗಿರುವ ಮೊತ್ತವೆಷ್ಟು;

ಈ) ಪ್ರಧಾನ ಅರ್ಚಕರಿಗೆ/ಅರ್ಚಕರಿಗೆ, ಸಿಬ್ಬಂದಿ ವರ್ಗದವರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ;